Reduction in the limit of Stability Fund Deposits

441. Sri D. S. NADKARNI (Ankola).—

Will the Minister for Education be pleased to stete :—

(*a*) whether relaxation has been made to Non-Government Secondary Schools in respect of depositing Stability Fund ;

(*b*) whether there is an order from Government to reduce the limit of stability fund from Rs. 10,000 to Rs. 5,000 ;

(*c*) if so, the date from which the order has come into effect ;

(*d*) whether the Government has allowed relaxation to Schools which have already deposited Rs. 10,000 and has allowed them to withdraw the balance of Rs. 5,000 ;

(*e*) if so, whether there are any cases of refusal ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) Yes. *Vide* Government Order No. ED 37 SHS 69 dated 3rd May 1969.

(*c*) From the current academic year.

(*d*) and (*e*) The matter is under examination.

ಶ್ರೀ ಡಿ. ಎಸ್. ನಾಡಕರ್ಣಿ.—ಸ್ವಾಮಿ, ನನ್ನ (ಉ) ಪ್ರಶ್ನೆಯಲ್ಲಿ ಹಾಗಿದ್ದಲ್ಲಿ ನಿರಾಕರಿಸಿರುವ ಸಂದರ್ಭಗಳೇನಾದರೂ ಇದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ ಈ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಆಮೇಲೆ 10 ಸಾವಿರ ರೂಪಾಯಿಗಳನ್ನು ಈಗಾಗಲೇ ಠೇವಣಿ ಯಾಗಿಟ್ಟಿರುವ ಶಾಲೆಗಳಿಗೆ ಸರ್ಕಾರದವರು ವಿನಾಯಿತಿಯನ್ನು ನೀಡಿ 5 ಸಾವಿರ ರೂಪಾಯಿಗಳ ಉಳಿಕೆ ಹಣವನ್ನು ವಾಪಸ್ಸು ಪಡೆದುಕೊಳ್ಳಲು ಅವರಿಗೆ ಅನುಮತಿಯನ್ನು ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಹಾಗಿದ್ದರೆ ಅಂಥವುಗಳನ್ನು ನಿರಾಕರಿಸಿರುವುದು ಯಾವುದಾದರೂ ಇದೆಯೇ, ಈಗ ನೀವು ಇಲ್ಲಿ ಸತ್ಯಕ್ಕೆ ದೂರವಾದ ಉತ್ತರವನ್ನು ಕೊಟ್ಟಿದ್ದೀರಿ, ಆದ್ದರಿಂದ ಸ್ಪಷ್ಟವಾದ ಉತ್ತರವನ್ನು ಹೇಳುತ್ತೀರಾ ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಿರ್ದಿಷ್ಟವಾಗಿ ನಿರಾಕರಣೆ ಮಾಡಿರತಕ್ಕ ವಿಷಯಗಳ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಆ ಹಣವನ್ನು ವಾಪಸ್ಸು ಕೊಡಬೇಕೇ ಹೇಗೆ ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಡಿ. ಎಸ್. ನಾಡಕರ್ಣಿ.—ನಮ್ಮ ಜಿಲ್ಲೆಯಲ್ಲಿ ನಾವು ನಡೆಸತಕ್ಕಂಥ ಹೈಸ್ಕೂಲಿಗೆ 10 ಸಾವಿರ ರೂಪಾಯಿಗಳ ಭದ್ರತಾ ನಿಧಿ ಠೇವಣಿಯನ್ನು ಇಡಬೇಕೆಂದು ಡಿ.ಪಿ.ಐ. ಅವರು ಅವರ ಆರ್ಡರಿನಲ್ಲಿ ಕೊಟ್ಟಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕಾಯಿದೆ ಪ್ರಕಾರ 10 ಸಾವಿರ ರೂಪಾಯಿಗಳ ಭದ್ರತಾ ನಿಧಿ ಠೇವಣಿಯನ್ನು ಇಡಬೇಕೆಂದು ಅವರು ಆರ್ಡರ್ ಕೊಟ್ಟಿದ್ದು ಸರಿ. ಆಗಿನ ರೂಲ್ಸ್ ಪ್ರಕಾರ ಆ ರೀತಿ ಮಾಡಿದ್ದು ಆಗಿದೆ. ಇತ್ತೀಚಿನ ನಿಯಮದ ಪ್ರಕಾರ 5 ಸಾವಿರ ರೂಪಾಯಿಗಳನ್ನು ವಾಪಸ್ಸು ಕೊಡುವುದಕ್ಕೆ ಬರುತ್ತದೆಯೇ ಹೇಗೆ ಎಂಬುದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ಯಾಮಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಸಗೀ ಸೆಕೆಂಡರಿ ಶಾಲೆಗಳನ್ನು ಸ್ಥಾಪನೆ ಮಾಡತಕ್ಕ ನಂಬಂಧದಲ್ಲಿ 10 ಸಾವಿರ ರೂಪಾಯಿಗಳ ಧಠ್ರತಾ ನಿಧಿ ಠೇವಣಿಯನ್ನು ಇಡಬೇಕೆಂದು ಸರ್ಕಾರದವರು ಆರ್ಡರ್ ಕೊಟ್ಟಿದ್ದಾರೆ. ಹಾಗಾದರೆ ಕಾಂಗ್ರೆಸ್ ಪಕ್ಷದ ನಮ್ಮ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಸಿದ್ದಾಪುರದಲ್ಲಿ ಸ್ಥಾಪನೆ ಮಾಡಿರತಕ್ಕ ಹೈಸ್ಕೂಲು ಮತ್ತು ಕಾಲೇಜುಗಳಿಗೆ ಎಷ್ಟು ಠೇವಣಿಯನ್ನು ಅವರಿಂದ ತೆಗೆದು ಕೊಂಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾವುದೇ ವ್ಯಕ್ತಿಗಳ ಅಥವಾ ಸಂಸ್ಥೆಗಳ ಪ್ರಶ್ನೆ ಇಲ್ಲಿ ಬರುವುದಿಲ್ಲ. ಈ ಒಂದು ಸುಧಾರಿತ ನಿಯಮಾವಳಿಯನ್ನು ಮಾಡಿದ್ದೇವೆ. ಅದರ ಪ್ರಕಾರ 5000 ಸಾವಿರ ರೂಪಾಯಿಗಳನ್ನು ಠೇವಣಿ ಇಟ್ಟರೆ ಸಾಕು. ಇದಕ್ಕೆ ಮೊದಲು 10,000 ಸಾವಿರ ರೂಪಾಯಿಗಳನ್ನು ಸ್ಟಬಲಟಿ ಫಂಡ್ ಎಂಬುದಾಗಿ ಕೊಡಬೇಕೆಂದು ಇತ್ತು. ಈ ಹೊಸ ಆದೇಶವನ್ನು ಎಲ್ಲರಿಗೂ ತಿಳಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇವೆ.

Coconut Pickups constructed in Tiptur

468. Sri V. L. SHIVAPPA (Tiptur).—

Will the Minister of State for Minor Irrigation be pleased to state :—

(*a*) the number of coconut pick-ups constructed in Tiptur Taluk subsequent to February 1968 ;

(*b*) the situation of these pickups ;

(*c*) the total amount spent thereon ;

Smt. BASAVARAJESHWARI (Deputy Minister for Social Welfare) [On behalf of SRI A. J. DODDAMETI (Minister of State for Minor Irrigation)].—

(*a*) Nil.

(*b*) Does not arise in view of reply to clause (*a*).

(*c*) Do.

ಶ್ರೀ ಎ. ಎಲ್. ಶಿವಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ ಒಂದೂ ಇಲ್ಲ ಎಂದು ಹೇಳಿದ್ದೀರಿ. 20-1-1969ರಲ್ಲಿ ಸಾಯಿಲ್ ಕನ್‌ಸರ್‌ವೇಷನ್ ಸ್ಕೀಮ್‌ನೊಳಗೆ ಇದಕ್ಕಾಗಿ ಹಣವನ್ನು ಒದಗಿಸಿದ್ದೇವೆಂದು ಹೇಳಿದ್ದಿರಿ. ಮತ್ತು ಈ ಒಡ್ಡು ನಾರೆಗಳನ್ನು ನಿರ್ಮಿಸುವುದು ಬಹಳ ಮುಖ್ಯವಾದ ವಿಷಯ ಎಂದು ಕೂಡ ಹೇಳಿದ್ದಿರಿ. ಅದರ ಪ್ರಕಾರ ಈ ಬಾಬಿಗೆ ಎಷ್ಟು ಹಣ ಒದಗಿಸಿದ್ದೀರಿ ಮತ್ತು ಏನೇನು ಕಾರ್ಯಕ್ರಮ ಹಾಕಕೊಂಡಿದ್ದೀರಿ ?

ಶ್ರೀಮತಿ ಬಸವರಾಜೇಶ್ವರಿ.—ಒಂದೂ ಇಲ್ಲ ಎಂದು ಹೇಳಿರುವುದು ಈ ಒಡ್ಡು ನಾರೆಗಳ ನಿರ್ಮಾಣ ಮೈನರ್ ಇರಿಗೇಷನ್ ಸ್ಕೀಮ್‌ನೊಳಗೆ ಬರುವುದಿಲ್ಲವಾದ ಕಾರಣದಿಂದ. ಸಾಯಿಲ್ ಕನ್ಸರ್‌ವೇಷನ್ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಸ್ಕೀಮ್‌ನೊಳಗೆ ಈ ಕೆಲಸವನ್ನು ತೆಗೆದು ಕೊಳ್ಳಬಹುದೆಂದು ಸರ್ಕಾರದ ಆರ್ಡರ್ ಆಗಿದೆ. ಮತ್ತು ಈ ಕೆಲಸವನ್ನು ಪ್ರಾರಂಭ ಮಾಡ ಬೇಕೆಂದು ಸಂಬಂಧಪಟ್ಟವರಿಗೆ ಹೇಳಲಾಗಿದೆ.